# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1139 (1233) |
| ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಸಿ.ಟಿ. ರವಿ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |
| ಉತ್ತರಿಸುವ ದಿನಾಂಕ | : | 18.03.2025 |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಜಿಂದಾಲ್ ಉಕ್ಕು ಕಂಪನಿಗೆ ಈವರೆಗೆ ನೀಡಿರುವ ಮತ್ತು ಹೊಸದಾಗಿ ನೀಡಲು ಉದ್ದೇಶಿಸಿರುವ ಜಮೀನು ಎಷ್ಟು (ವಿವರ ನೀಡುವುದು); ಪ್ರತೀ ಎಕರೆಗೆ ನಿಗದಿಪಡಿಸಿರುವ ಮೊತ್ತ ಎಷ್ಟು; ಈ ಜಮೀನಿಗೆ ಹಾಲಿ ಇರುವ ಮಾರುಕಟ್ಟೆ ದರ ಎಷ್ಟು;</td><td>ಮೆ|| ಜೆಎಸ್‌ಡಬ್ಲ್ಯೂ ಸ್ಟೀಲ್ ಲಿಮಿಟೆಡ್ ಘಟಕಕ್ಕೆ ಬಳ್ಳಾರಿ ಜಿಲ್ಲೆ, ಸಂಡೂರು ತಾಲ್ಲೂಕಿನ ತೋರಣಗಲ್ಲು, ಕುರೇಕುಪ್ಪ, ಮುಸೇನಾಯಕನಹಳ್ಳಿ ಮತ್ತು ಯರಬನಹಳ್ಳಿ ಗ್ರಾಮಗಳಲ್ಲಿ ಕೆಳಕಂಡಂತೆ ಭೂಮಿಯನ್ನು ನೀಡಲಾಗಿದೆ.
<table>
<tr><th>ಹಂಚಿಕೆ ವರ್ಷ</th><th>ವಿಸ್ತೀರ್ಣ (ಎಕರೆ)</th><th>ಹಂಚಿಕೆ ದರ (ರೂ.)</th><th>ಶುದ್ಧ ಕ್ರಯ ನೀಡಿದ ವರ್ಷ</th><th>ಅಂತಿಮ ದರ (ರೂ.)</th></tr>
<tr><td>1995</td><td>3430</td><td>45,000/-</td><td>2005</td><td>45,000/-</td></tr>
<tr><td>2003</td><td>615</td><td>55,000/-</td><td>2011</td><td>55,000/-</td></tr>
<tr><td>2004</td><td>250</td><td>65,000/-</td><td>ಪೂರಕ ಘಟಕಗಳಿಗೆ</td><td>65,000/-</td></tr>
<tr><td>2005-06</td><td>2000.58</td><td>90,000/-</td><td>2024</td><td>1,22,200/-</td></tr>
<tr><td>2007</td><td>1666.73</td><td>1,22,199/-</td><td>2024</td><td>1,50,635/-</td></tr>
</table>
ಏಕ ಘಟಕ ಸಂಕೀರ್ಣ ಯೋಜನೆಯಡಿ ಭೂಸ್ವಾಧೀನ ಪಡಿಸಿಕೊಳ್ಳುವ ಕಂಪನಿಗಳಿಗೆ, ಭೂಹಂಚಿಕೆ ಸಮಯದಲ್ಲಿ ಭೂಸ್ವಾಧೀನದ ವೆಚ್ಚ ಹಾಗೂ ಸೇವಾ ಶುಲ್ಕವನ್ನು ಸೇರಿ ಹಂಚಿಕೆ ದರ ನಿಗಧಿಪಡಿಸಲಾಗುತ್ತದೆ. ಶುದ್ಧ ಕ್ರಯ ಪತ್ರ ಸಮಯದಲ್ಲಿ ಭೂಸ್ವಾಧೀನ ವೆಚ್ಚವನ್ನು ಹೆಚ್ಚಿಗೆ ನೀಡದಿದ್ದಲ್ಲಿ, ಹಂಚಿಕೆ ದರವು ಅಂತಿಮ ದರವಾಗುತ್ತದೆ.<br><br>ಶುದ್ಧ ಕ್ರಯ ಪತ್ರ ನೆರವೇರಿಸುವ ಸಮಯದಲ್ಲಿ ಇಂದಿನ ಭೂಮಿಯ ಮಾರುಕಟ್ಟೆ ದರವನ್ನು ಪಡೆಯುವುದಿಲ್ಲ. ಈ ನೀತಿಯು ಮೆ|| ಜೆಎಸ್‌ಡಬ್ಲ್ಯೂ ಸ್ಟೀಲ್ ಲಿಮಿಟೆಡ್‌ಗೆ ಸೇರಿದಂತೆ ಎಲ್ಲಾ ಹಂಚಿಕೆದಾರರಿಗೂ ಅನ್ವಯಿಸುತ್ತದೆ.</td></tr>
<tr><td>ಆ</td><td>ರಾಜ್ಯ ಉಚ್ಚ ನ್ಯಾಯಾಲಯ ಜಿಂದಾಲ್ ಉಕ್ಕು ಕಂಪನಿಗೆ ಜಮೀನು ನೀಡುವ ಕುರಿತು ನೀಡಿರುವ ಸೂಚನೆ ಏನು;</td><td>ಮೆ|| ಜೆಎಸ್‌ಡಬ್ಲ್ಯೂ ಸ್ಟೀಲ್ ಲಿಮಿಟೆಡ್ ಇವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ 10560 / 2022 ಅನ್ನು ದಾವೆ ಹೂಡಿ, ಲೀಸ್ ಕಂ ಸೇಲ್ ಕರಾರು ಪತ್ರಗಳ ಷರತ್ತುಗಳನ್ವಯ ಶುದ್ಧ ಕ್ರಯ ಪತ್ರವನ್ನು ನೆರವೇರಿಸುವಂತೆ ಸರ್ಕಾರಕ್ಕೆ ನಿರ್ದೇಶನವನ್ನು ನೀಡಲು ಕೋರಿರುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ 12.03.2024ರ ಆದೇಶದಲ್ಲಿ ಕೆಳಕಂಡಂತೆ ಆದೇಶಿಸಿದೆ:<br><br>"Writ Petition is allowed in the light of the observations made in the order;</td></tr>
</table>

| | | |
|---|---|---|
| | | A mandamus issues to the 1st respondent/State to take the Government Order dated 06.05.2021, which is a product of decision of the Cabinet on 26.04.2021, to its logical conclusion and execute sale deeds in favour of the petitioner / Company". |
| ಇ | ಜಿಂದಾಲ್ ಕಂಪನಿಗೆ ನೀಡಲು ಉದ್ದೇಶಿಸಿರುವ ಜಮೀನಿನ ಪೈಕಿ ಸರ್ಕಾರಿ ಮತ್ತು ಖಾಸಗಿ ಜಮೀನಿನ ವಿವರವನ್ನು ತಾಲ್ಲೂಕುವಾರು ನೀಡುವುದು; ಖಾಸಗಿ ಜಮೀನು ಮಾಲೀಕರು ತಮ್ಮ ಜಮೀನನ್ನು ನೀಡಲು ಒಪ್ಪಿಗೆ ನೀಡಿದ್ದಾರೆಯೇ; ಈವರೆಗೆ ಎಷ್ಟು ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು) | ಸರ್ಕಾರದ ಆದೇಶ ದಿನಾಂಕ 06.09.2024 ರಲ್ಲಿ ಅನುಮೋದನೆ ನೀಡಿರುವ ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕಿನ ತೋರಣಗಲ್ಲು ಮತ್ತು ಕುರೇಕುಪ್ಪ ಗ್ರಾಮಗಳಲ್ಲಿನ 2000.58 ಎಕರೆ ಜಮೀನಲ್ಲಿ 114.19 ಎಕರೆ ಸರ್ಕಾರಿ ಜಮೀನಾಗಿದ್ದು ಹಾಗೂ ತೋರಣಗಲ್ಲು, ಮುಸೇನಾಯಕನ ಹಳ್ಳಿ ಮತ್ತು ಯರಬನಹಳ್ಳಿ ಗ್ರಾಮಗಳಲ್ಲಿನ 1666.73 ಎಕರೆ ಜಮೀನಿನಲ್ಲಿ 78.43 ಎಕರೆ ಸರ್ಕಾರಿ ಜಮೀನಾಗಿರುತ್ತದೆ. ಬಾಕಿ ಉಳಿದ ಜಮೀನು ಪಟ್ಟಾ ಭೂಮಿಯಾಗಿರುತ್ತದೆ.<br><br>ಭಾರತ ಸರ್ಕಾರವು 1971-72 ರಲ್ಲಿ M/s ವಿಜಯನಗರ ಸ್ಟೀಲ್ ಲಿಮಿಟೆಡ್, (VSL) ಹೆಸರಿನಲ್ಲಿ ಸಮಗ್ರ ಉಕ್ಕಿನ ಸ್ಥಾವರವನ್ನು ಸ್ಥಾಪಿಸಲು 9,341 ಎಕರೆ ಭೂಮಿಯನ್ನು ಸಂಡೂರು ತಾಲ್ಲೂಕಿನಲ್ಲಿ ಸ್ವಾಧೀನಪಡಿಸಿಕೊಂಡಿದ್ದು, ತದನಂತರ, ಭಾರತ ಸರ್ಕಾರವು ದಿನಾಂಕ 23.02.1994 ರಂದು ಕರ್ನಾಟಕ ಸರ್ಕಾರಕ್ಕೆ ಭೂಮಿಯನ್ನು ವರ್ಗಾಯಿಸಿರುತ್ತದೆ. ಆದ್ದರಿಂದ, ಖಾಸಗಿ ಜಮೀನು ಮಾಲೀಕರು ಈಗ ಒಪ್ಪಿಗೆ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ. |
| ಈ | ಜಿಂದಾಲ್ ಕಂಪನಿಗೆ ಜಮೀನು ಹಂಚಿಕೆ ಕುರಿತು ಜಮೀನು ಮಾಲೀಕರು ಹಾಗೂ ಅಗತ್ಯಕ್ಕಿಂತ ಹೆಚ್ಚು ಜಮೀನು ಹಂಚಿಕೆ ವಿರೋಧಿಸಿ ವಿವಿಧ ಸಂಘಟನೆಗಳಿಂದ ವಿರೋಧ ವ್ಯಕ್ತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಜಮೀನು ಮಾಲೀಕರ ಮತ್ತು ಸಂಘಟನೆಗಳ ಬೇಡಿಕೆ ಏನು; ಬೇಡಿಕೆ ಕುರಿತು ಸರ್ಕಾರದ ನಿಲುವೇನು; | ದಿನಾಂಕ 27.05.2019 ರಂದು ನಡೆದ ಸಚಿವ ಸಂಪುಟದ ಅನುಮೋದನೆ ನಂತರ ಕೆಲವು ಜನಪ್ರತಿನಿಧಿಗಳು ಹಾಗೂ ಇತರರು ಮೈಸೂರು ಮಿನರಲ್ಸ್ ಲಿಮಿಟೆಡ್ ಸಂಸ್ಥೆಗೆ ಕಂಪನಿಯು ನೀಡಬೇಕಾದ ಬಾಕಿ ಹಣ, ಮಾನ್ಯ ಲೋಕಾಯುಕ್ತ ಇವರು ಸಲ್ಲಿಸಿರುವ ಅಕ್ರಮ ಗಣಿಗಾರಿಕೆ ವರದಿಯಲ್ಲಿ ಸದರಿ ಕಂಪನಿಯ ಹೆಸರನ್ನು ಪ್ರಸ್ತಾಪಿಸಿರುವುದು ಹಾಗೂ ಅಂತಿಮ ಬೆಲೆಯನ್ನು ನಿಗಧಿಪಡಿಸುವುದು ಕಡಿಮೆ ಬೆಲೆಯಾಗಿದೆ ಎಂದು ತಿಳಿಸಿರುವ ಹಿನ್ನೆಲೆಯಲ್ಲಿ, ಸಚಿವ ಸಂಪುಟದ ತೀರ್ಮಾನದ ಮರುಪರಿಶೀಲನೆಗೆ ಹಾಗೂ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಸಚಿವ ಸಂಪುಟದ ಉಪ ಸಮಿತಿಯನ್ನು ದಿನಾಂಕ 04.12.2020 ರಂದು ಅಂದಿನ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಅಧ್ಯಕ್ಷತೆಯಲ್ಲಿ, ಮಾನ್ಯ ಕಂದಾಯ ಸಚಿವರು ಹಾಗೂ ಮಾನ್ಯ ಗೃಹ ಸಚಿವರನ್ನೊಳಗೊಂಡಂತೆ ಸಚಿವ ಸಂಪುಟದ ಉಪಸಮಿತಿಯನ್ನು ರಚಿಸಲಾಗಿತ್ತು.<br><br>ಸಚಿವ ಸಂಪುಟದ ಉಪ ಸಮಿತಿಯು ಲೀಸ್ ಕಂ ಸೇಲ್ ಪತ್ರಗಳಲ್ಲಿನ ಷರತ್ತುಗಳನ್ನು ಪೂರೈಸಿರುವುದರಿಂದ ಘಟಕಕ್ಕೆ ಶುದ್ಧ ಕ್ರಯ ಪತ್ರ ಜಾರಿಗೊಳಿಸಬಹುದೆಂದು ಹಾಗೂ ಜೆಎಸ್‌ಡಬ್ಲ್ಯೂ ಮತ್ತು ಎಂಎಂಎಲ್ ನಡುವೆ ಇರುವ ವಾಣಿಜ್ಯ ತಕರಾರಿನ ಕುರಿತು ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನ ಮೇಲೆ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್‌ಎಲ್‌ಪಿ ಹೂಡುವ ಬಗ್ಗೆ ಮಾನ್ಯ ಅಡ್ವೊಕೇಟ್ ಜನರಲ್‌ರವರ ಅಭಿಪ್ರಾಯ ಪಡೆದು ಅದರಂತೆ ಕ್ರಮ ವಹಿಸಲು ಶಿಫಾರಸ್ಸು ಮಾಡಿರುತ್ತದೆ.<br><br>ಮಾನ್ಯ ಅಡ್ವೊಕೇಟ್ ಜನರಲ್‌ರವರ ಅಭಿಪ್ರಾಯದಂತೆ, KSMCL ಸಂಸ್ಥೆಯು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ SLP 6378/2021 ಹೂಡಿರುತ್ತದೆ.<br><br>ಸಚಿವ ಸಂಪುಟದ ಉಪಸಮಿತಿಯ ಶಿಫಾರಸ್ಸಿನಂತೆ, ದಿನಾಂಕ 26.04.2021 ರಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ ಸದರಿ ಕಂಪನಿಗೆ ಶುದ್ಧ ಕ್ರಯ ಪತ್ರಗಳನ್ನು ಜಾರಿಗೊಳಿಸಲು ಅನುಮತಿಸಿದ್ದು, |

<table>
<tr>
<td></td>
<td></td>
<td>ಅದರಂತೆ, ಸರ್ಕಾರದ ಆದೇಶವನ್ನು ದಿನಾಂಕ 06.05.2021 ರಂದು ಹೊರಡಿಸಲಾಗಿದೆ.<br><br>ಆದರೆ, ದಿನಾಂಕ 27.05.2021 ರಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ ದಿನಾಂಕ 26.04.2021 ರಂದು ತೆಗೆದುಕೊಂಡ ತೀರ್ಮಾನವನ್ನು ಧೃಢೀಕರಣ ಮಾಡಿರುವುದಿಲ್ಲ. ಅದರಂತೆ, ಕಂಪನಿಗೆ ಶುದ್ಧ ಕ್ರಯ ಪತ್ರವನ್ನು ಜಾರಿಗೊಳಿಸಿರುವುದಿಲ್ಲ.<br><br>ತದನಂತರ, ಮೆ|| ಜೆಎಸ್‌ಡಬ್ಲ್ಯೂ ಸ್ಟೀಲ್ ಲಿಮಿಟೆಡ್ ಇವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪೆಟಿಷನ್ ಸಂಖ್ಯೆ 10560/2022 ಅನ್ನು ದಾವೆ ಹೂಡಿ, ಸರ್ಕಾರದ ಆದೇಶ ದಿನಾಂಕ 06.05.2021 ಮತ್ತು ಲೀಸ್ ಕಂ ಸೇಲ್ ಕರಾರು ಪತ್ರಗಳ ಷರತ್ತುಗಳನ್ವಯ ಶುದ್ಧ ಕ್ರಯ ಪತ್ರವನ್ನು ನೆರವೇರಿಸುವಂತೆ ಸರ್ಕಾರಕ್ಕೆ ನಿರ್ದೇಶನವನ್ನು ನೀಡಲು ಕೋರಿರುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ 12.03.2024ರ ಆದೇಶದಲ್ಲಿ ದಿನಾಂಕ 06.05.2021ರ ಸರ್ಕಾರದ ಆದೇಶವನ್ನು ತಾರ್ಕಿಕ ತೀರ್ಮಾನ ತೆಗೆದುಕೊಳ್ಳಲು ಮತ್ತು ಕಂಪನಿಯ ಪರವಾಗಿ ಶುದ್ಧ ಕ್ರಯ ಪತ್ರ ನೆರವೇರಿಸಲು mandamus ಜಾರಿಗೊಳಿಸಿದೆ.</td>
</tr>
<tr>
<td>ಉ</td>
<td>ಜಿಂದಾಲ್ ಕಂಪನಿ ರೈತರಿಗೆ ನೀಡಿರುವ ಸೌಲಭ್ಯಗಳೇನು;<br>ರಾಜ್ಯಾದ್ಯಂತ ಜಿಂದಾಲ್ ಕಂಪನಿಯಿಂದ ಎ,ಬಿ,ಸಿ ಮತ್ತು ಗ್ರೂಪ್ "ಡಿ" ವರ್ಗದಡಿ ಸೃಷ್ಟಿಯಾಗಿರುವ ನೇರ ಉದ್ಯೋಗ ಎಷ್ಟು? (ಜಿಲ್ಲಾವಾರು ವಿವರವನ್ನು ಹುದ್ದೆವಾರು ನೀಡುವುದು)</td>
<td>ಕಂಪನಿಯು 2018-19ನೇ ಸಾಲಿನಿಂದ 2023-24ನೇ ಸಾಲಿನ ವರೆಗೆ CSR ಯೋಜನೆಯಡಿ ಸಂಡೂರು ತಾಲ್ಲೂಕು ಹಾಗೂ ಸುತ್ತಮುತ್ತಲಿನ ತಾಲ್ಲೂಕುಗಳಲ್ಲಿ ವಿವಿಧ ಚಟುವಟಿಕೆಗಳಿಗೆ ಖರ್ಚು ಮಾಡಿರುವ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.<br><br>ಮೆ|| ಜೆಎಸ್‌ಡಬ್ಲ್ಯೂ ಸ್ಟೀಲ್ ಲಿಮಿಟೆಡ್ ಕಂಪನಿಯು ಈ ಕೆಳಕಂಡಂತೆ ಉದ್ಯೋಗ ನೀಡಿರುತ್ತದೆ.
<table>
<tr><th>ವಿವರ</th><th>ಗ್ರೂಪ್ ಎ</th><th>ಗ್ರೂಪ್ ಬಿ</th><th>ಗ್ರೂಪ್ ಸಿ</th><th>ಗ್ರೂಪ್ ಡಿ</th><th>ಒಟ್ಟು</th></tr>
<tr><td>ಒಟ್ಟು ಉದ್ಯೋಗ</td><td>770</td><td>1698</td><td>5401</td><td>1887</td><td>9756</td></tr>
<tr><td>ಸ್ಥಳೀಯರು</td><td>568</td><td>1383</td><td>5401</td><td>1887</td><td>9239</td></tr>
<tr><td>ಶೇಕಡ</td><td>73.77%</td><td>81.45%</td><td>100%</td><td>100%</td><td>94.70%</td></tr>
</table>
ಅಲ್ಲದೇ, ಭೂಮಿ ನೀಡಿದ ಕುಟುಂಬಕ್ಕೆ ಒಟ್ಟು 786 ಜನರಿಗೆ ಉದ್ಯೋಗ ನೀಡಲಾಗಿದೆ.</td>
</tr>
</table>

**ಸಿಐ 108 ಎಸ್‌ಪಿಐ 2025**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು